VIJAYAVANI ● BENGALURU

## 2 ವರ್ಷ ಬಳಿಕ ರಾಜ್ಯಕ್ಕೆ ಸಮಸ್ಯೆ? | ಪರಿಸ್ಥಿತಿ ನಿರ್ವಹಣೆಯೇ ಸವಾಲು
## ತೆರಿಗೆ ಸಂಗ್ರಹಕ್ಕಿಂತ ವೆಚ್ಚವೇ ಅಧಿಕ | ಬಂಡವಾಳಕ್ಕೆ ಸಾಲವೇ ಗತಿ

# ಕಾದಿದೆ ಆರ್ಥಿಕ ಸಂಕಷ್ಟ

ವಿ.ವಾ. 13-2-21

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ಈಗಾಗಲೇ ಸಾಲದ ಸುಳಿಗೆ ಸಿಲುಕಿರುವ ರಾಜ್ಯ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಹೆಚ್ಚಲಿರುವ ವೆಚ್ಚ ಸರಿದೂಗಿಸಲು ಮತ್ತಷ್ಟು ಸಾಲ ಮಾಡದ ಹೊರತು ಬೇರೆ ಮಾರ್ಗವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಒಂದೆಡೆ ರಾಜ್ಯದ ತೆರಿಗೆ ಸಂಗ್ರಹ ಕಡಿಮೆಯಾಗುತ್ತಿದ್ದರೆ, ಇನ್ನೊಂದೆಡೆ ಮಿತಿ ಇಲ್ಲದಂತೆ ವೆಚ್ಚ ಹೆಚ್ಚಳವಾಗುತ್ತಿದೆ. 2023ರ ಬಳಿಕ ಜಿಎಸ್‌ಟಿ ಪರಿಹಾರವೂ ನಿಂತುಹೋದಲ್ಲಿ ಹಣಕಾಸು ಸರಿದೂಗಿಸುವುದೇ ದೊಡ್ಡ ಸವಾಲಾಗಲಿದೆ ಎಂಬುದನ್ನು ಸರ್ಕಾರಿ ಅಂಕಿಅಂಶಗಳೇ ದೃಢಪಡಿಸುತ್ತವೆ.

**ವಿಜಯವಾಣಿ ವಿ|ಶೇ|ಷ**

**ಎಚ್ಚರಿಕೆಯ ಹೆಜ್ಜೆ:** ಸಿಎಂ ಯಡಿಯೂರಪ್ಪ ಅವರಿಗೆ ಮುಂದಿನ ಎರಡು ವರ್ಷಗಳ ನಂತರದ ರಾಜ್ಯದ ಆರ್ಥಿಕ ಸ್ಥಿತಿಗತಿ ಕರಾಳವಾಗಿರಲಿದೆ ಎಂಬುದರ ಅರಿವಾಗಿದೆ. ಆದ್ದರಿಂದಲೇ ಎಲ್ಲಿಯೂ ಅನಗತ್ಯ ಯೋಜನೆಗಳಿಗೆ ಅವಕಾಶ ಇಲ್ಲದಂತೆ ಸದ್ಯ ಬಜೆಟ್ ಸಿದ್ಧತೆಯಲ್ಲಿ ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆಂದು ಮೂಲಗಳು ಖಚಿತಪಡಿಸಿವೆ.

### ಬಂಡವಾಳ ವೆಚ್ಚ?

**2021-22ಕ್ಕೆ**
**59,645 ಕೋಟಿ ರೂ.**

**2022-23ಕ್ಕೆ**
**35,410 ಕೋಟಿ ರೂ.**

**2023-24ಕ್ಕೆ**
**26,038 ಕೋಟಿ ರೂ.**

**ಹೊಸ ಅವಕಾಶಗಳಿಲ್ಲ:** ವೇತನ, ಪಿಂಚಣಿ, ಸಹಾಯಧನದಂತಹ ಬದ್ಧ ವೆಚ್ಚ ಶೇ.90 ಹೆಚ್ಚಳವಾಗಿರುವುದರಿಂದ ಹೊಸ ಯೋಜನೆಗಳಿಗೆ ಅವಕಾಶ ಸೀಮಿತವಾಗಿವೆ. ತೆರಿಗೆ ಸಂಗ್ರಹದಲ್ಲಿ ಹೊಸ ಅವಕಾಶ ಗೋಚರವಾಗುತ್ತಿಲ್ಲ. ವೆಚ್ಚಗಳ ಮೇಲೂ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ರಾಜ್ಯ ಸರ್ಕಾರ ಕರೊನಾ ಹಿನ್ನೆಲೆಯಲ್ಲಿ ಹೆಚ್ಚಿನ ಸಾಲಕ್ಕೆ ಅವಕಾಶ ಪಡೆದಿದ್ದರೂ ಅದು ಈ ವರ್ಷಕ್ಕಷ್ಟೇ ಸೀಮಿತವಾಗಲಿದೆ. ಮುಂದಿನ ವರ್ಷಗಳಲ್ಲಿ ಹಣಕಾಸಿನ ಸ್ಥಿತಿಗತಿ ಮೇಲೆ ಆಗುವ ಪರಿಣಾಮ ತಡೆಯುವುದು ಕಷ್ಟ ಎಂಬ ಅಭಿಪ್ರಾಯ ಹಣಕಾಸು ಇಲಾಖೆಯಲ್ಲಿದೆ.

**ಹೆಚ್ಚಲಿದೆ ವೆಚ್ಚ:** ಸರ್ಕಾರದ ಅಂಕಿಅಂಶಗಳ ಪ್ರಕಾರ ಮುಂದಿನ ಹಣಕಾಸು ವರ್ಷದಲ್ಲಷ್ಟೇ ತೆರಿಗೆ ಸಂಗ್ರಹ ಹಾಗೂ ವೆಚ್ಚ ಸರಿದೂಗಿಸಬಹುದು. ಆದರೆ 2022-23, 2023-24ರಲ್ಲಿ ವೆಚ್ಚವೇ ಹೆಚ್ಚಾಗಲಿದೆ. ಈಗಾಗಲೇ ಕುಂಟುತ್ತಿರುವ ಜಿಎಸ್‌ಟಿ ಪರಿಹಾರವೇನಾದರೂ 2023ರ ನಂತರ ನಿಂತು ಹೋದರೆ ಸಮಸ್ಯೆ ಬಿಗಡಾಯಿಸುತ್ತದೆ. 2021-22 ಸಾಲಿಗೆ ರಾಜ್ಯದ ಸಂಪನ್ಮೂಲ ಸಂಗ್ರಹ 2,01,686 ಕೋಟಿ ರೂ.ಗಳಿಗೆ ತಲುಪಬಹುದೆಂಬ ಅಂದಾಜಿದೆ. ಆದರೆ ಕರೊನಾ ಕಾರಣಕ್ಕೆ ಸ್ವಲ್ಪ ಕಡಿಮೆಯಾಗಬಹುದು. ವೆಚ್ಚಗಳು 2,00,713 ಕೋಟಿ ರೂ.ಗಳಿರುತ್ತದೆ. 2022-23ನೇ ಸಾಲಿಗೆ ತೆರಿಗೆ ಸಂಗ್ರಹವೂ ಕಡಿಮೆಯಾಗಿ 1,91,227 ಕೋಟಿ ರೂ.ಗಳಾದರೆ ವೆಚ್ಚ 2,21,970 ಕೋಟಿ ರೂ.ಗಳಿಗೆ ತಲುಪುತ್ತದೆ.

ಪುಟ 7A



### ತಜ್ಞರ ಸಲಹೆಗಳು

- ಸಹಾಯಧನಗಳ ನೇರ ವರ್ಗಾವಣೆ
- ವೆಚ್ಚಗಳ ಮೇಲೆ ನಿಯಂತ್ರಣ
- ಸಾಲದಿಂದ ಬರುವ ಹಣ ಪೂರ್ತಿ ಬಂಡವಾಳ ವೆಚ್ಚಕ್ಕೆ
- ಜಿಎಸ್‌ಟಿ ಪರಿಹಾರ ಮುಂದುವರಿಕೆಗೆ ಕೇಂದ್ರದ ಮೇಲೆ ಒತ್ತಡ
- 15 ನೇ ಹಣಕಾಸು ಆಯೋಗದಿಂದ ಆಗಿರುವ ಅನ್ಯಾಯ ಸರಿಪಡಿಸಿಕೊಳ್ಳಲು ಪ್ರಯತ್ನ
- ಹಣಕಾಸು ಆಯೋಗದಿಂದ ಕಡಿಮೆಯಾಗಿರುವ 11,215 ಕೋಟಿ ರೂ. ಪಡೆಯಲು ಯತ್ನ

### ಬದ್ಧ ವೆಚ್ಚಗಳ ಹೆಚ್ಚಳ (ಕೋಟಿ ರೂ.ಗಳಲ್ಲಿ)

| ವರ್ಷ | ವೇತನ | ನಿವೃತ್ತಿ ವೇತನ | ಸಹಾಯ ಧನ |
|---|---|---|---|
| 2021-22 | 39,399 | 24,210 | 22,788 |
| 2022-23 | 43,877 | 26,389 | 26,208 |
| 2023-24 | 55,743 | 28,764 | 30,349 |

### ಕಾಡುವುದೇ ರಾಜಸ್ವ ಕೊರತೆ?

ರಾಜಸ್ವ ಕೊರತೆ ಮುಂದಿನ ದಿನಗಳಲ್ಲಿ ಹೆಚ್ಚುತ್ತ ಹೋಗುತ್ತದೆ. 2021-22ಕ್ಕೆ 973 ಕೋಟಿ ರೂ. ಉಳಿಕೆಯಾಗಬಹುದೆಂದು ಅಂದಾಜಿಸಲಾಗಿತ್ತು. ಆದರೆ ಈಗ ಎಲ್ಲವೂ ಏರುಪೇರಾಗಿರುವುದರಿಂದ ಉಳಿಕೆ ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಆದರೆ 2022-23ಕ್ಕೆ 30,743 ಕೋಟಿ ರೂ ಹಾಗೂ 2023-24ಕ್ಕೆ 46,831 ಕೋಟಿ ರೂ. ರಾಜಸ್ವ ಕೊರತೆಯಾಗಲಿದೆ ಎಂದು ಲೆಕ್ಕ ಹಾಕಲಾಗಿದೆ.

## ಕಡಿಮೆಯಾಗಿದೆ ಕೇಂದ್ರದ ತೆರಿಗೆ ಪಾಲು




ಕೇಂದ್ರ ಸರ್ಕಾರದಿಂದ ಬರುವ ತೆರಿಗೆಯ ಪಾಲು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.39.9 ಕಡಿಮೆಯಾಗಿದೆ. ಕಳೆದ ವರ್ಷ 9 ತಿಂಗಳಿನಲ್ಲಿ 33,536 ಕೋಟಿ ರೂ. ನೀಡಿದ್ದ ಕೇಂದ್ರ ಈ ವರ್ಷ 13,550 ಕೋಟಿ ರೂ. ಮಾತ್ರ ನೀಡಿದೆ. ಸಹಾಯಧನಗಳಲ್ಲೂ ಶೇ. 22.4 ಕಡಿಮೆಯಾಗಿವೆ. ಕಳೆದ ವರ್ಷ 9 ತಿಂಗಳಿನಲ್ಲಿ 27,825 ಕೋಟಿ ರೂ. ಸಿಕ್ಕಿದ್ದರೆ ಈ ವರ್ಷ 21,594 ಕೋಟಿ ರೂ. ನೀಡಿದೆ. ಒಟ್ಟಾರೆ ಕೇಂದ್ರದಿಂದ ಜಿಎಸ್‌ಟಿ ಪರಿಹಾರ ಹೊರತುಪಡಿಸಿ 60,161 ಕೋಟಿ ರೂ.ಗಳಲ್ಲಿ ಈವರೆಗೆ 35,144 ಕೋಟಿ ರೂ. ಮಾತ್ರ ಬಂದಿದೆ ಎಂಬುದು ಹಣಕಾಸು ಇಲಾಖೆಯ ಮಾಹಿತಿ.